ಊರ ಹೊರಗೆ ಬೀಡುಬಿಟ್ಟ ಜನತೆ







ಗುಳೇ ಲಕ್ಕಮ್ಮ ಜಾತ್ರೆಗೆ ಊರು ಖಾಲಿಯಾದ ದೃಶ್ಯ

ಈ ಸಂಪ್ರದಾಯ ತುಂಬ ವರ್ಷಗಳಿಂದ ನಡೆದುಕೊಂಡು ಬಂದಿದೆ. 4 ಅಥವಾ 5 ವರ್ಷಗಳಿಗೊಮ್ಮೆ ಆಚರಿಸಲಾಗುವ ಈ ವಿಶಿಷ್ಟವಾದ ಜಾತ್ರೆಯಂದು ಇಡೀ ಊರು ಖಾಲಿಯಾಗುತ್ತದೆ. ಜನರಷ್ಟೇ ಅಲ್ಲ ನಾಯಿ, ಕುರಿ, ಕೋಳಿ, ಜಾನುವಾರು ಸೇರಿದಂತೆ ಒಂದೇ ಒಂದು ನರಪಿಳ್ಳೆಯೂ ಇರದಂತೆ ಇಡೀ ಗ್ರಾಮ ಖಾಲಿಯಾಗುತ್ತದೆ!

ಜಾತ್ರೆಯ ಇತರ ಆಚರಣೆಗಳೂ ವಿಭಿನ್ನವಾಗಿವೆ. ಜಾತ್ರೆ ಆರಂಭದ ಮುನ್ನಾ ದಿನ ರಾತ್ರಿ ದೇವಿಯನ್ನು ಪಟ್ಟಣದ ಊರಮ್ಮ ಬಯಲಿನಲ್ಲಿರುವ ಗುಳೆಲಕ್ಕಮ್ಮನ ಕಟ್ಟೆಯ ಮೇಲೆ ತಂದು ಕೂಡಿಸಲಾಗುತ್ತದೆ. ಮರುದಿನ ಬೆಳಗಿನ ಜಾವ 3 ಗಂಟೆಯಿಂದ ಮಹಿಳೆಯರೆಲ್ಲ ದೇವಿಗೆ ಉಡಿಯನ್ನು (ಕಾಯಿ, ಅಕ್ಕಿ, ಬೇಳೆ, ಬೆಲ್ಲ, ಹಸಿರುಬಳೆ, ದಕ್ಷಿಣೆ ತುಂಬಿದ ಮೊರ) ಅರ್ಪಿಸುತ್ತಾರೆ. ಈ ಕಾರ್ಯಕ್ರಮ ಮುಗಿಯುವ ಹೊತ್ತಿಗೆ ಪಟ್ಟಣದಲ್ಲಿ ಎಲ್ಲ ಮನೆಗಳು ಖಾಲಿಯಾಗುತ್ತವೆ. ನಂತರ ಸಕಲ ವಾದ್ಯಗಳೊಂದಿಗೆ ಗುಳೆಲಕ್ಕಮ್ಮ ಹೊತ್ತ ಮೆರವಣಿಗೆ ಊರಲ್ಲಿ ಒಂದು ಸುತ್ತು ಹಾಕುತ್ತದೆ. ಪಟ್ಟಣದಲ್ಲಿ ಯಾರೂ ಇಲ್ಲ ಎಂಬುದನ್ನು ಖಚಿತಪಡಿಸಿಕೊಂಡ ನಂತರ ಊರ ಬಾಗಿಲಿಗೆ ಬೇಲಿಯನ್ನು ಹಾಕಲಾಗುತ್ತದೆ.

ಲಕ್ಕಮ್ಮ ಊರ ಹೊರಗೆ ಹೋಗುವಾಗ ಊರಿನ ಆಯಗಾರರ ಮನೆಯವರು ದೇವಿಯ ಜೊತೆಗೆ ತಮಗೆ ಬೇಕಾದ ಸಾಮಾನುಗಳನ್ನು ಕಟ್ಟಿಕೊಂಡ ಬುಟ್ಟಿ ತಲೆಯ ಮೇಲೆ ಹೊತ್ತು ಹೊರಡುತ್ತಾರೆ. ಊರಮ್ಮನ ಬಾವಿಯ ಹಾದಿಯಲ್ಲಿ ಹೊರಟ ಗುಳೆಲಕ್ಕಮ್ಮನನ್ನು ಊರ ಹೊರಗೆ ಹಾಕಿರುವ ಪೌಳಿಗಳಲ್ಲಿ ಹಾದು ಪಟ್ಟಣದಿಂದ ಸುಮಾರು 4 ಕಿ.ಮೀ. ದೂರದಲ್ಲಿರುವ ಗೋವಿಂದಗಿರಿ ಬಳಿ ಇರುವ ಅಲದ ಮರದ ಬಳಿ ಸ್ಥಾಪಿಸಲಾಗುತ್ತದೆ. ಪಟ್ಟಣದ ಬಾಣಂತಿಯರು, ಅಂಗವಿಕಲರು, ಮುದುಕರು, ಮಕ್ಕಳು, ಸಾಕು ಪ್ರಾಣಿಗಳು ಸೇರಿದಂತೆ ಒಂದನ್ನೂ ಬಿಡದೇ ಜೊತೆಯಲ್ಲಿ ತೆಗೆದುಕೊಂಡು ಸಾಗುತ್ತಾರೆ. ಹೀಗೆ ಗುಳೆ ಹೊರಟ ಜನ ಊರ ಹೊರಗಿನ ತೋಟಗಳಲ್ಲಿ, ತಮ್ಮ ಸ್ವಂತ ತೋಟಗಳಲ್ಲಿ ಅಥವಾ ತಮಗೆ ಅನುಕೂಲವಾದ ಸ್ಥಳಗಳಲ್ಲಿ ಬಿಡಾರ ಹೂಡಿ ಅಡುಗೆ ಮಾಡುತ್ತಾರೆ. ಸುತ್ತಮುತ್ತಲಿನ ಊರಿನ ಜನರು, ಸ್ನೇಹಿತರು ಮತ್ತು ಸಂಬಂಧಿಕರೊಂದಿಗೆ ಊಟ ಮಾಡುತ್ತಾರೆ.

ಮತ್ತೆ ಗೋಧೂಳಿ ಸಮಯಕ್ಕೆ ದೇವಿಯನ್ನು ಪಟ್ಟಣಕ್ಕೆ ಕರೆತರಲಾಗುತ್ತದೆ. ಪಟ್ಟಣಕ್ಕೆ ಬರುವಾಗ ಗುಳೆ ಹೋದ ಜನರೆಲ್ಲ ದೇವಿಯ ಹಿಂದೆಯೇ ಬರುವುದರೊಂದಿಗೆ ಜಾತ್ರೆ ಪೂರ್ಣಗೊಳ್ಳುತ್ತದೆ. ಈ ಜಾತ್ರೆಯನ್ನು ನೋಡಲು ಮತ್ತೆ 5 ವರ್ಷಗಳವರೆಗೆ ಕಾಯಬೇಕು.